ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಮತ್ತು
ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆಯಿಂದ....

# ಸೂಜಿ-ದಾರ

ಸಂಪುಟ : 15 ಸಂಚಿಕೆ : 2 ಪುಟ : 8 ಅಕ್ಟೋಬರ್ – ನವೆಂಬರ್ 2019

ಆತ್ಮೀಯರೇ,

ಭಾರತದಲ್ಲಿ ಇಂದು ದುಡಿಯುವ ವರ್ಗದಲ್ಲಿ ಸಂಘಟಿತ ಕ್ಷೇತ್ರದಲ್ಲಿ ದುಡಿಯುತ್ತಾ ಭದ್ರತೆಯಿರುವ ಸುಸ್ಥಿರ ವೇತನ ಪಡೆಯುತ್ತಿರುವ ಸಂಖ್ಯೆ 13.4% ನಷ್ಟಿದೆ. 2011ರ ಜನಗಣತಿಯ ಪ್ರಕಾರ ದೇಶದ 96% ಮಹಿಳಾ ಕಾರ್ಮಿಕರು ಅಸಂಘಟಿತ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದಾರೆ.

**"ಅಸಂಘಟಿತ ಕ್ಷೇತ್ರ"**

ಅತ್ಯಂತ ಕಡಿಮೆ ಕೂಲಿ ನೀಡುವ, ಕೆಲಸದ ಅಭದ್ರತೆ ಇರುವ, ಕೆಲಸದ ಗಂಟೆಗಳು ಹೆಚ್ಚಿರುವ, ಸುರಕ್ಷತೆ/ಆರೋಗ್ಯ ಭದ್ರತೆ ಇಲ್ಲದ, ಭವಿಷ್ಯದ ಬಗ್ಗೆ ಯೋಚಿಸಲೂ ಆಗದಿರುವ, ಇದರೊಂದಿಗೆ ತಮ್ಮ ಮಾಲೀಕರನ್ನು ಗುರುತಿಸಲೇ ಆಗದಂತಹ ಕೆಲಸಗಳಲ್ಲಿ ದುಡಿವ ವಲಯವೇ ಅಸಂಘಟಿತ ಕ್ಷೇತ್ರ.



1990 ರಲ್ಲಿ ಜಾಗತೀಕರಣ ಪ್ರಕ್ರಿಯೆ ಆರಂಭ ಆದಾಗಿನಿಂದ ಲೂ ಸಂವಿಧಾನದ ಮೂಲ ಆಶಯಗಳಾದ ಸಮಾನತೆ, ಭ್ರಾತೃತ್ವ, ಸ್ವಾತಂತ್ರ್ಯ ಮೂಲ್ಯಗಳು ಮರೆಯಾಗಿ ಅರ್ಹತೆ, ಪ್ರತಿಭೆ, ಸಾಮರ್ಥ್ಯ ಮುಂತಾದವುಗಳು ಮುನ್ನಲೆಗೆ ಬಂತು. ಈಗ ನವ ಬಂಡವಾಳ ಶಾಹಿ ಯುಗ ನಡೆಯುತ್ತಿದೆ. ನಮ್ಮ ಸರ್ಕಾರಗಳು ಜಾಗತಿಕ ಬಂಡವಾಳಕ್ಕೆ ತಲೆಬಾಗಬೇಕಿದೆ. ಪ್ರಭುತ್ವ ತನ್ನ ಜನರ ಹಿತಾಸಕ್ತಿಯ ಬದಲಿಗೆ ಕಾರ್ಪೊರೇಟ್ ಹಿತಾಸಕ್ತಿಯ ರಕ್ಷಿಸುತ್ತಿದೆ. ಆರೋಗ್ಯ, ಶಿಕ್ಷಣ, ಬ್ಯಾಂಕ್, ವಿಮೆ ಎಲ್ಲವೂ ಖಾಸಗೀಕರಣವಾಗುತ್ತಿದೆ ಮತ್ತು ಖಾಸಗೀ ವಲಯಕ್ಕೆ ಎಂದಿಗೂ ಸಾಮಾಜಿಕ ನ್ಯಾಯ, ಸುರಕ್ಷೆ, ಲಿಂಗಸಮಾನತೆ, ಆರ್ಥಿಕ ಸಮಾನತೆ ಯಾವ ಮೌಲ್ಯವೂ ಮುಖ್ಯವಾಗದೆ, ಲಾಭವೇ ಅದರ ಮುಖ್ಯ ಗುರಿಯಾಗುತ್ತದೆ.

ಈ ಬೆಳವಣಿಗೆಯಿಂದ ಅಸಂಘಟಿತ ಕ್ಷೇತ್ರದ ಉದ್ಯೋಗಗಳು ಹೆಚ್ಚಾಗುತ್ತಿವೆ. ಇಂದು ಇಟ್ಟಿಗೆ, ಬುಟ್ಟಿ ಹೆಣಿಗೆ, ನಾರು ಹೆಣಿಗೆ, ಚರ್ಮಹದ, ತಂಬಾಕು, ಗೋಡಂಬಿ, ಮನೆಕೆಲಸ, ತರಕಾರಿ, ಸೊಪ್ಪು ಮಾರುವುದು, ಬಳೆ ಅಲಂಕಾರದ ವಸ್ತುಗಳು, ಬೀಡಿ, ಊದುಬತ್ತಿ, ಕೃಷಿಯಂತಹ ಅಸಂಘಟಿತ ಕ್ಷೇತ್ರದಲ್ಲಿ ಕೆಲಸಗಳು ಹೆಚ್ಚಾಗಿದ್ದು, ಇದರಲ್ಲಿ ಅತಿ ಹೆಚ್ಚು ಮಹಿಳಾ ಕಾರ್ಮಿಕರೇ ದುಡಿಯುತ್ತಿದ್ದಾರೆ. ಈ ಕಾರ್ಮಿಕರಿಗೆ ಘನತೆಯುಳ್ಳ ಕೆಲಸದ ಪರಿಸರ, ಪಿ.ಎಫ್, ಪರಿಹಾರ, ಪಿಂಚಣಿ, ಹೆರಿಗೆ ಸೌಲಭ್ಯ ಯಾವುದೂ ಇಲ್ಲ. ಆದರೆ ಅಸಂಘಟಿತ ವಲಯದ ಕಾರ್ಮಿಕರಿಗೆ ಈ ಬಗ್ಗೆ ಯಾವುದೇ ಕಾನೂನೇ ಇಲ್ಲ .



ಈ ಆರ್ಥಿಕತೆಯಲ್ಲಿ ಮಹಿಳೆಯರಿಗೆ ಹೆಚ್ಚು ಕೆಲಸ ದೊರಕುತ್ತಿದೆ ಅಂತ ಮೇಲ್ನೋಟಕ್ಕೆ ಅನಿಸುತ್ತದೆ, ಆದರೆ, ಯಾವ ರೀತಿಯ ಕೆಲಸ? ಅವರನ್ನು ಆರ್ಥಿಕವಾಗಿ ಸಬಲರನ್ನಾಗಿಸುವ, ಅವರಿಗೆ ಉದ್ಯೋಗ ಭದ್ರತೆ ನೀಡುವ, ಅವರ ಭವಿಷ್ಯಕ್ಕೆ ಆಸರೆಯಾಗುವ ಕೆಲಸವೇ? ಬದಲಿಗೆ ಅವರ ಶ್ರಮಕ್ಕೆ ಸರಿಯಾದ ಕೂಲಿಯನ್ನೂ ಕೊಡದೆ, ಸದಾ ಅಭದ್ರತೆಯಲ್ಲಿ ನರಳುವಂತೆ ಮಾಡಿ, ಊಟ, ಬಟ್ಟೆ, ವಸತಿಗೂ ಪರದಾಡುವಂತೆ ಮಾಡಿ, "ಸಾಯಬಾರದು, ಬದುಕಬಾರದು" ಎಂಬ ಅತಂತ್ರ ಸ್ಥಿತಿಯಲ್ಲಿ ಕಾರ್ಮಿಕರನ್ನು ಇರಿಸುವುದೇ ಈ ಅಸಂಘಟಿತ ಕ್ಷೇತ್ರದ ಕೊಡುಗೆ.

ಇದರ ಹಿಂದಿನ ಕಾರಣ ಹುಡುಕುತ್ತಾ ಹೋದರೆ, ಮಹಿಳೆಯರ ಕುರಿತು ಇರುವ ಪಿತೃ ಪ್ರಧಾನತೆ ಧೋರಣೆ ಬೇರೆ ವೇಷ ಧರಿಸಿ ಬಂದಿದೆ ಎಂದು ಸ್ಪಷ್ಟವಾಗಿ ತಿಳಿಯುತ್ತದೆ. ಇಂದಿಗೂ ಕೃಷಿಯಾಗಲೀ, ಯಾವುದೇ ವೃತ್ತಿಯಾಗಲೀ ಕೊನೆಗೆ ಕುಟುಂಬವೂ ಸಹ ಮಹಿಳೆಯರ ಶ್ರಮವಿಲ್ಲದೆ ನಡೆಯುವುದಿಲ್ಲ, ಆದರೆ ಅವರ ಶ್ರಮಕ್ಕೆ ಬೆಲೆಯಿಲ್ಲ. ಹಿಂದೆ ಯಾವುದೇ ಹಣ ನೀಡದೆ ಅವರಿಂದ ದುಡಿಸಿಕೊಳ್ಳಲಾಗುತ್ತಿತ್ತು, ಈಗ ಮಹಿಳಾ ಕಾರ್ಮಿಕರಿಗೆ ಕಡಿಮೆ ಕೂಲಿಕೊಟ್ಟರೆ ಸಾಕು ಎಂಬ ಧೋರಣೆ ಕಂಡು ಬರುತ್ತಿದೆ. ಅವರು ಸಂಘಟಿತರಾಗುವುದಿಲ್ಲ, ಮಾಡಿದ ಕೆಲಸವನ್ನೇ (ಪುನರಾವರ್ತಿತ) ಮಾಡಲು ಬೇಸರಿಸಿಕೊಳ್ಳುವುದಿಲ್ಲ, ಚೌಕಾಸಿ ಮಾಡುವುದಿಲ್ಲ, ಪ್ರತಿರೋಧ ವ್ಯಕ್ತ ಪಡಿಸುವುದಿಲ್ಲ, ಗೊಣಗುವುದಿಲ್ಲ, ಅದಕ್ಕೇ ಅವರನ್ನು ಕೆಲಸಕ್ಕೆ ತೆಗೆದುಕೊಂಡಿದ್ದೇವೆ ಎಂದು ಹಲವಾರು ಮ್ಯಾನೇಜ್‌ಮೆಂಟ್‌ಗಳು ನೇರವಾಗಿ ಹೇಳುತ್ತವೆ. ಜೊತೆಗೆ ಮಹಿಳೆಯರ ದುಡಿಮೆ ಕುಟುಂಬಕ್ಕೆ ಹೆಚ್ಚುವರಿ ದುಡಿಮೆ, ಏಕೆಂದರೆ ಕುಟುಂಬದ ಮುಖ್ಯಸ್ಥ ಗಂಡಸರ ದುಡಿಮೆಗೆ ಇವರದು ಒಂದು ಸೇರ್ಪಡೆಯಷ್ಟೇ, (ಸೆಕೆಂಡರ್ ಇನ್ ಕಮ್). ಆದ್ದರಿಂದ ಇವರಿಗೆ ಹೆಚ್ಚೇನೂ ಕೊಡುವುದು ಅವಶ್ಯಕತೆ ಯಿಲ್ಲ ಎಂದೂ ಸಹ ಮ್ಯಾನೇಜ್‌ಮೆಂಟ್‌ಗಳು ನೇರವಾಗಿ ಹೇಳುತ್ತವೆ.



ಸಂಘಟಿತ ಉದ್ಯಮ ಎಂದು ಕರೆಸಿಕೊಳ್ಳುವ ಗಾರ್ಮೆಂಟ್ಸ್ ಉದ್ಯಮದಲ್ಲಿ ದುಡಿಯುವ ಕಾರ್ಮಿಕರ ಪರಿಸ್ಥಿತಿಯೂ ಸಹ ಇದಕ್ಕಿಂತ ಹೊರತೇನಿಲ್ಲ. ಅದಕ್ಕೆ ಹೇಗೆ, ಇಡೀ ದೇಶದ ಪರಿಸ್ಥಿತಿಯೇ ಕಾರ್ಮಿಕ

*(ಮುಂದಿನ ಪುಟಕ್ಕೆ)*



Scanned with OKEN Scanner

ವಿರೋಧಿಯಾಗಿ ಬದಲಾಗಿ, ಅವರು ಜೀತದಾಳುಗಳನ್ನಾಗಿಸಲಾಗುತ್ತಿದೆ. ಇನ್ನೊಂದು ಕಡೆ ಕಾರ್ಮಿಕ ಕಾನೂನುಗಳನ್ನು ಸುಧಾರಣೆ ಮಾಡುತ್ತೇವೆಂಬ ನೆಪದಲ್ಲಿ ಇರುವ ಕಾನೂನುಗಳನ್ನು ಒಂದಕ್ಕೊಂದು ಸೇರ್ಪಡೆ ಮಾಡಿ, ಮಾಲೀಕರ ಪರವಾಗಿ ಅದನ್ನು ಬದಲಿಸುತ್ತಿರುವುದೂ ನಡೆಯುತ್ತಿದೆ. ಈ ನಿಟ್ಟಿನಲ್ಲಿ ಕಳೆದ ಆಗಸ್ಟ್‌ನಲ್ಲಿ, ಕನಿಷ್ಠವೇತನ ಕಾಯಿದೆ, ಬೋನಸ್ ಕಾಯಿದೆ, ವೇತನ ಪಾವತಿ ಕಾಯಿದೆ ಮತ್ತು ಸಮಾನ ಕೆಲಸಕ್ಕೆ ಸಮಾನ ವೇತನ ಕಾಯಿದೆಗಳನ್ನು ಒಟ್ಟಿಗೇ ಸೇರಿಸಿ ವೇತನ ಸಂಹಿತೆ (Wage code) ಅಸ್ತಿತ್ವಕ್ಕೆ ಬಂದಿದೆ. ಇನ್ನೂ ಹಲವಾರು ಬರುವುದಿದೆ.

ಒಟ್ಟಿನಲ್ಲಿ ಎಂದಿಗೂ ಕಾರ್ಮಿಕರ ಜೀವನ ಸುಸೂತ್ರವಾಗಿ ನಡೆಯುವುದಿಲ್ಲ ಎಂದು ಪದೇ ಪದೇ ಸಾಬೀತಾಗುತ್ತಿದೆ.

**ಪ್ರತಿಭಾ ಆರ್.**

□

## ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ವತಿಯಿಂದ ಅರಿವನ್ನು ಪಸರಿಸುತ್ತಿರುವ 'ಅರಿವಿನ ಪಯಣ'



ಮಂಡ್ಯದಲ್ಲಿ "ಅರಿವಿನ ಪಯಣ"ದ ಉದ್ಘಾಟನೆ

2012 ರಲ್ಲಿ ಮಂಗಳೂರಿ ನಲ್ಲಿ ನಡೆದ 'ಪಬ್ ದಾಳಿ' ಹಾಗೂ ದೆಹಲಿಯ 'ನಿರ್ಭ ಯಾ ಪ್ರಕರಣ'ಗಳ ದೌರ್ಜನ್ಯ ವನ್ನು ವಿರೋಧಿಸುತ್ತಾ ಪ್ರಾರಂಭವಾದ"ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ" ವತಿಯಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಾರ್ಚ್ 8 ರ ಮಹಿಳಾ ದಿನಾಚರಣೆಯನ್ನು ದೌರ್ಜನ್ಯವನ್ನು ವಿರೋಧಿಸುವ ನಿಟ್ಟಿನಲ್ಲಿ, ಸಮಾನ ಮನಸ್ಕರರೆಲ್ಲ ಸೇರಿ ಆಚರಿಸಿಕೊಂಡು ಬರಲಾಗುತ್ತಿದೆ. ಸಮಾನತೆ ಒಕ್ಕೂಟದ ಆಶಯವಾಗಿದೆ. ಶೋಷಿತ ಮಹಿಳೆಯರ ಧ್ವನಿಯಾಗಿ ನಿಲ್ಲುವ ನಿಟ್ಟಿನ ಜೊತೆಗೆ ದಮನಿತರು, ತುಳಿತಕ್ಕೆ ಒಳಗಾದವರು, ಕೂಲಿ–ಕಾರ್ಮಿಕರ, ತಾರತ್ಯಮಕ್ಕೆ ಸಿಲುಕಿದವರು, ಪೌರ ಕಾರ್ಮಿಕರು, ಗಾರ್ಮೆಂಟ್ಸ್ ಕಾರ್ಮಿಕರು, ಹೀಗೆ ಶೋಷಿತರ ಪರವಾಗಿ ಕಾರ್ಯನಿರ್ವಹಿಸುತ್ತ ಸಾಗುತ್ತಿದೆ. ಯಾವುದೇ ರೀತಿಯ ಸಾಂಸ್ಥಿಕ ಚೌಕಟ್ಟಿಗೆ ಒಳಪಡದ ಈ ಒಕ್ಕೂಟದ ಸದಸ್ಯತ್ವ ಶುಲ್ಕವೆಂದರೆ 'ಎದೆಯಲ್ಲಿ ಒಂದು ಹನಿ ಪ್ರೀತಿ, ಜೊತೆಗೆ ನಿರ್ಭೀತಿ', ಒಕ್ಕೂಟದ ಆಶಯವೇ 'ಪ್ರೀತಿಯ ರಾಜಕಾರಣ'.

ಈ ರೀತಿಯಾಗಿ ಪ್ರಾರಂಭವಾದ ಒಕ್ಕೂಟವು ಹೀಗಾಗಲೇ 7 ಜಿಲ್ಲೆಗಳಲ್ಲಿ ಮಾರ್ಚ್ 8ರ ಕಾರ್ಯಕ್ರಮಗಳನ್ನು ಆಚರಿಸಿಕೊಂಡು ಬಂದಿದೆ. ಆದರೆ 2017ರ ಕೊಪ್ಪಳ ಜಿಲ್ಲೆಯ ಮಾರ್ಚ್ 8, ಕಾರ್ಯಕ್ರಮದ ಹೊತ್ತಿಗೆ ಕೇವಲ ಇದು 2 ದಿನದ ಕಾರ್ಯಕ್ರಮಕ್ಕೆ ಸೀಮಿತವಾಗದೆ, ಸ್ಥಳೀಯವಾಗಿ ನಡೆಯುತ್ತಿದ್ದ ತಾರತಮ್ಯ, ಬಾಲ್ಯವಿವಾಹ, ಗರ್ಭಿಣಿಯರ ಸಾವು, ಅನಕ್ಷರತೆ ಹೀಗೆ ಹಲವು ವಿಷಯಗಳ ಕುರಿತು ಆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಜನರಿಗೆ ಅರಿವು ನೀಡುವ ಕಾರ್ಯಕ್ರಮವನ್ನು ಮಾಡುತ್ತಾ ಬಂದಿತು. ಈ ಚಟುವಟಿಕೆಗೆ 2018ರ ಶಿವಮೊಗ್ಗದ ಅಧ್ಯಯನ ಶಿಬಿರದಲ್ಲಿ ಒಂದು ಖಚಿತ ರೂಪುರೇಷೆ ದೊರಕಿತು, 'ದೌರ್ಜನ್ಯದ ಕುರಿತು ಹೆಚ್ಚಾಗಿ ಅರಿವು ಬೇಕಾಗಿರುವುದು ಮಕ್ಕಳಿಗೆ; ಏಕೆಂದರೆ, ಹಲವು ವಿಷಯಗಳ ಕುರಿತು ಚರ್ಚಿಸಲು ಹಾಗೂ ಮುಕ್ತ ಅಭಿಪ್ರಾಯ ಹಂಚಿಕೊಳ್ಳಲು ಮಕ್ಕಳಿಗೆ ಯಾವ ವೇದಿಕೆಯೂ ಇಲ್ಲ, ಆದ್ದರಿಂದ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ದೌರ್ಜನ್ಯ ಮತ್ತು ತಾರತಮ್ಯದ ಕುರಿತು ತಿಳುವಳಿಕೆ ನೀಡಬೇಕು ಮತ್ತು ಈ ಅರಿವು ನಿರಂತರವಾಗಿರಬೇಕು ಎಂಬ ಖಚಿತ ಅಭಿಪ್ರಾಯ ಎಲ್ಲರಿಂದಲೂ ಬಂದಿತು. ಈ ಹಿನ್ನೆಲೆಯಲ್ಲಿ "ಅರಿವಿನ ಪಯಣ" ಎಂಬ ಸಣ್ಣ ಕಿರುಪುಸ್ತಿಕೆಯನ್ನು ಮುದ್ರಿಸಿ, ಆ ಬಗ್ಗೆ ಕಾರ್ಯಕ್ರಮವನ್ನು ಶಿವಮೊಗ್ಗದ ಶಾಲಾ–ಕಾಲೇಜುಗಳಲ್ಲಿ ಪ್ರಾರಂಭಿಸಲಾಯಿತು. ಈ ಕಿರುಹೊತ್ತಗೆಯಲ್ಲಿ ಸಾಮಾನ್ಯವಾಗಿ ಸಮಾಜದಲ್ಲಿರುವ, ಜಾತಿ ಅಸ್ಪೃಶ್ಯತೆ, ಬಡವ ಶ್ರೀಮಂತ, ಕಪ್ಪು ಬಿಳುಪು, ಗಂಡು ಹೆಣ್ಣು ಮುಂತಾದ ತಾರತಮ್ಯಗಳನ್ನು ಕುರಿತ ಹಾಡುಗಳು, ಕಿರುನಾಟಕ, ಚಿತ್ರ ಪ್ರದರ್ಶನ, ಸಂವಾದಗಳು, ನಾಟಕ, ಮುಟ್ಟಿನ ಬಗ್ಗೆ ಹಾಡುಗಳು, ಹೀಗೆ ಅನೇಕ ವಿಷಯಗಳಿವೆ ಇವುಗಳನ್ನು ಒಂದು ಗಂಟೆಯ ಕಾರ್ಯಕ್ರಮದಲ್ಲಿ ಹಲವಾರು ಚಟುವಟಿಕೆಗಳ ಮೂಲಕ ಮಕ್ಕಳಿಗೆ ತಲುಪಿಸಲಾಗುತ್ತಿದೆ. ಕಾರ್ಯಕ್ರಮದ ನಂತರ ಮಕ್ಕಳೊಂದಿಗೆ ಸಂವಾದ ನಡೆಸಲಾಗುತ್ತದೆ, ಅದರಲ್ಲಿ ಅವರ ಹಲವಾರು ಅನುಮಾನಗಳಿಗೆ ಉತ್ತರ ಕೊಡುವ ಪ್ರಯತ್ನ ಮಾಡಲಾಗುತ್ತದೆ.

ಈ ಸರಳ ಚಟುವಟಿಕೆಗಳು ಮಕ್ಕಳಲ್ಲಿ ಅಪಾರ ಆಸಕ್ತಿ ಮತ್ತು ಕುತೂಹಲವನ್ನು ಹುಟ್ಟುಹಾಕುತ್ತಿವೆ. ಶಿವಮೊಗ್ಗದಲ್ಲಿ ಈ ಅರಿವಿನ ಪಯಣವು ಸುಮಾರು 25,000 ಕ್ಕೂ ಮೀರಿ ಶಾಲಾ ಕಾಲೇಜು ಮಕ್ಕಳನ್ನು ತಲುಪಿತು.

2019 ರ ಸಮಾವೇಶವು ಧಾರವಾಡದಲ್ಲಿ ನಿಶ್ಚಯವಾಗಿ ಅಲ್ಲಿಯೂ ಸಹ ಎಲ್ಲ ತಾಲ್ಲೂಕುಗಳಲ್ಲಿ ಸಾವಿರಾರು ಶಾಲಾ ಕಾಲೇಜು ಮಕ್ಕಳಿಗೆ ಈ ಕಾರ್ಯಕ್ರಮವನ್ನು ನಡೆಸಲಾಯಿತು. ಅದಲ್ಲದೆ ಬೆಂಗಳೂರು, ಶಿವಮೊಗ್ಗದಲ್ಲಿಯೂ ಈ ಅರಿವಿನ ಪಯಣವು ಮುಂದುವರೆಯಿತು.

ಮುಂಬರುವ 2020 ರ ಸಮಾವೇಶವನ್ನು ಮಂಡ್ಯ ಜಿಲ್ಲೆಯಲ್ಲಿ ನಡೆಸಲು ತೀರ್ಮಾನಿಸಿದ್ದರಿಂದ ಅದರ ಪೂರ್ವಭಾವಿಯಾಗಿ ಮಂಡ್ಯದ ತಾಲ್ಲೂಕುಗಳ ಶಾಲಾಕಾಲೇಜು ಮಕ್ಕಳಿಗೆ ಈ ಅರಿವಿನ ಪಯಣ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಮೊದಲ ಕಾರ್ಯಕ್ರಮವು ಮಂಡ್ಯದ ಮಾಂಡವ್ಯ ಶಿಕ್ಷಣ ಸಂಸ್ಥೆಯಲ್ಲಿ ನಡೆಸುವ ಮೂಲಕ ಉದ್ಘಾಟಿಸಲಾಗಿದೆ ಮತ್ತು ಜಿಲ್ಲೆಯ ಹಲವಾರು ಶಾಲಾಕಾಲೇಜುಗಳಲ್ಲಿ ಸುಗಮವಾಗಿ ನಡೆಸಲಾಗುತ್ತಿದೆ.

ಒಕ್ಕೂಟವು ಈ 'ಅರಿವಿನ ಪಯಣ' ದ ಮೂಲಕ ಮುಂದಿನ ಪ್ರಜೆಗಳಾದ ಮಕ್ಕಳಿಗೆ ಒಂದು ತಾರತಮ್ಯ ರಹಿತ, ದೌರ್ಜನ್ಯ ರಹಿತ ಸಮಸಮಾಜವನ್ನು ನಿರ್ಮಿಸುವ ಕುರಿತು ಅರಿವು ಮೂಡಿಸುತ್ತಿದೆ.

□



Scanned with OKEN Scanner

# ಕರ್ನಾಟಕದ ಗಾರ್ಮೆಂಟ್ಸ್ ಕಾರ್ಮಿಕರು, ಅವರ ಆರೋಗ್ಯ ಸಮಸ್ಯೆಗಳು ಮತ್ತು ಇ.ಎಸ್.ಐ



**ಸೆಂಟರ್ ಫಾರ್ ಲೇಬರ್ ಸ್ಟಡೀಸ್, ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ (NLSIU) ಮತ್ತು GATWU ಎರಡೂ ಸಂಸ್ಥೆಗಳು ಗಾರ್ಮೆಂಟ್ಸ್ ಕಾರ್ಮಿಕರಿಗೆ ದೊರೆಯುತ್ತಿರುವ ಇ.ಎಸ್.ಐ ಸೌಲಭ್ಯದ ಬಗ್ಗೆ ಒಂದು ಅಧ್ಯಯನವನ್ನು ಕೈಗೊಂಡಿತ್ತು. ಈ ಅಧ್ಯಯನವು ಅವರ ಆರೋಗ್ಯ ಸಮಸ್ಯೆಗೂ ಮತ್ತು ಕೆಲಸ ಹಾಗೂ ಜೀವನದ ಪರಿಸ್ಥಿತಿಗೂ ಸಂಬಂಧದ ಮೇಲೆ ಬೆಳಕು ಚೆಲ್ಲಲು; ಮತ್ತು ಕಾರ್ಮಿಕರ ಅವಶ್ಯಕತೆಗಳನ್ನು ಇ.ಎಸ್.ಐ ಎಷ್ಟರಮಟ್ಟಿಗೆ ಪೂರೈಸುತ್ತಿದೆ ಎಂಬುದನ್ನು ಅವರದೇ ದೃಷ್ಟಿಯಲ್ಲಿ ಅರ್ಥೈಸಿಕೊಳ್ಳಲು ಪ್ರಯತ್ನಿಸಿದೆ. ಈ ಅಧ್ಯಯನ ವರದಿಯ ಸಂಕ್ಷಿಪ್ತ ರೂಪವನ್ನು ಇಲ್ಲಿ ಕೊಡಲಾಗಿದೆ.**

ಭಾಗ 1

ಕರ್ನಾಟಕದ ಸಂಘಟಿತ ಕ್ಷೇತ್ರದಲ್ಲಿ ಗಾರ್ಮೆಂಟ್ಸ್ ಉದ್ಯಮವು, ಬಹು ದೊಡ್ಡದು ಮತ್ತು ಇ.ಎಸ್.ಐ ನಿಗಮದಲ್ಲಿ ಅತಿ ಹೆಚ್ಚು ಕಾರ್ಮಿಕರ ಸದಸ್ಯತ್ವ ಹೊಂದಿರುವ ಉದ್ಯಮ. ಇ.ಎಸ್.ಐನಲ್ಲಿ ಸಿಗುವ ವೈದ್ಯಕೀಯ ಲಾಭಗಳು, ವೇತನಸಹಿತ ರಜೆ, ಮತ್ತು ಹೆಚ್ಚಿನ ಚಿಕಿತ್ಸೆ ಬೇಡುವ ಕಾಯಿಲೆಗಳಿಗೆ ಸಿಗುವ ಉಚಿತ ಆಸ್ಪತ್ರೆ ವ್ಯವಸ್ಥೆ, ಈ ಎಲ್ಲ ಕಾರಣದಿಂದ ಬಹುತೇಕ ಗಾರ್ಮೆಂಟ್ಸ್ ಕಾರ್ಮಿಕರು ಇ.ಎಸ್.ಐ ಅನ್ನು ಅವಲಂಬಿಸಿದ್ದಾರೆ. ಕರ್ನಾಟಕದಾದ್ಯಂತ ಇ.ಎಸ್.ಐ ನಿಗಮವು 96192 ಕಾರ್ಖಾನೆಗಳ 34.96 ಲಕ್ಷ ಕಾರ್ಮಿಕರ ಸದಸ್ಯತ್ವ ಹೊಂದಿದೆ, ಮತ್ತು ಅಂದಾಜು 1.39 ಕೋಟಿ ಜನರಿಗೆ ಆರೋಗ್ಯರಕ್ಷಣೆಯ ಸೇವೆಯನ್ನು ಒದಗಿಸುತ್ತಿದೆ. ಬೆಂಗಳೂರು ಬಿಟ್ಟು ಇತರ ಸ್ಥಳದಲ್ಲಿ ಎಲ್ಲಿ ಕಾರ್ಮಿಕರಿಗೆ ಖಾಸಗೀ ವೈದ್ಯಕೀಯ ಸೌಲಭ್ಯದ ಕೊರತೆ ಇದೆಯೋ, ಎಲ್ಲಿ ಕಾರ್ಮಿಕರಿಗೆ ಇ.ಎಸ್.ಐ ಸೌಲಭ್ಯ ಅತಿ ಮುಖ್ಯವಾಗಿದೆಯೋ ಅಲ್ಲಿ ಇ.ಎಸ್.ಐ ಸೇವೆಯು ಅತ್ಯಂತ ಕಳಪೆಯಾಗಿದೆ.

ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಆರೋಗ್ಯದ ತೊಂದರೆಗೂ ಅವರ ಕೆಲಸಕ್ಕೂ ಸಂಬಂಧ ಹುಡುಕುವ ಉದ್ದೇಶದಿಂದ ಗಾರ್ಮೆಂಟ್ಸ್ ಕಾರ್ಮಿಕರ ದಿನಚರಿಯನ್ನು, ಈ ಅಧ್ಯಯನದಲ್ಲಿ ಮುಖ್ಯವಾಗಿ ಪರಿಗಣಿಸಲಾಯಿತು. ಮಹಿಳಾ ಕಾರ್ಮಿಕರ ವಯಸ್ಸು, ಅವರ ಕುಟುಂಬದ ಗಾತ್ರ, ಅವರ ಮನೆಕೆಲಸ, ಕಾರ್ಖಾನೆಗೂ, ಮನೆಗೂ ಇರುವ ದೂರ, ಅವರು ಕಾರ್ಖಾನೆ ತಲುಪುವ ವಿಧಾನ, ಅಲ್ಲಿನ ಕೆಲಸ, ಹೆಚ್ಚುವರಿ ಕೆಲಸ (ಓಟಿ), ತೀವ್ರ ಕೆಲಸದ ಒತ್ತಡ, ಕೆಲಸದ ಸುರಕ್ಷತಾ ಸಾಧನಗಳು, ಅವರು ಕೆಲಸ ಮಾಡುವ ಭಂಗಿ, (ನಿಂತು ಅಥವಾ ಕುಳಿತು), ಇತ್ಯಾದಿಗಳನ್ನು ಕುರಿತು ಅವರೊಂದಿಗೆ ಚರ್ಚಿಸಲಾಯಿತು.

ಪ್ರತಿದಿನದ ಒತ್ತಡದ ಬದುಕಿನಲ್ಲಿ ಕಾರ್ಮಿಕರು ಅನುಭವಿಸುವ ಸಾಮಾನ್ಯ ಕಾಯಿಲೆಗಳೆಂದರೆ ತೀವ್ರತರವಾದ ಬೆನ್ನು, ತಲೆ, ಮಂಡಿ ಮತ್ತು ಕಾಲು ನೋವುಗಳು ಸಾಮಾನ್ಯವಾಗಿವೆ. ಮತ್ತು ಈ ತೀವ್ರ ಕಾಯಿಲೆಗಳಿಗೆ ಅವರ ಕೆಲಸವು ದೊಡ್ಡಮಟ್ಟದ ಕೊಡುಗೆ ನೀಡುತ್ತಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

## ಕಾರ್ಮಿಕರ ರಾಜ್ಯ ವಿಮಾ ನಿಗಮ (ESI) ಮತ್ತು ಗಾರ್ಮೆಂಟ್ಸ್ ಉದ್ಯಮ

ಮುಖ್ಯವಾಗಿ ಹೆರಿಗೆ ಸೌಲಭ್ಯ ಮತ್ತು ಕುಟುಂಬದ ಇತರ ಸದಸ್ಯರಿಗೆ ಸಿಗುವ ಆರೋಗ್ಯ ಸೇವೆ ಇವುಗಳ ಕಾರಣಕ್ಕೆ ಮಹಿಳಾ ಕಾರ್ಮಿಕರಿಗೆ ಇ.ಎಸ್.ಐ ಒಂದು ಪ್ರಮುಖ ಸಾಮಾಜಿಕ ಸುರಕ್ಷಾ ಕ್ರಮವಾಗಿದೆ.

ಸಾಮಾನ್ಯ ಕಾಯಿಲೆಗಳ ಚಿಕಿತ್ಸೆಗೆ ಇ.ಎಸ್.ಐ ಬಳಕೆ

ಬೆಂಗಳೂರಿನಲ್ಲಿ ಬಹುತೇಕ ಕಾರ್ಮಿಕರು ಸಾಮಾನ್ಯ ಕಾಯಿಲೆಗಳಿಗೆ ಚಿಕಿತ್ಸೆ ಪಡೆಯಲು ಇ.ಎಸ್.ಐಗೆ ಹೋಗುವುದಿಲ್ಲ, ಏಕೆಂದರೆ ಇಲ್ಲಿ ಕಾರ್ಮಿಕರ ಮನೆಗೂ ಇ.ಎಸ್.ಐ ಡಿಸ್ಪೆನ್ಸರಿಗೂ ಇರುವ ಅಂತರ. ಕೆಲವೆಡೆ ಇದು 2 ರಿಂದ 7 ಕಿ.ಮೀ ಇರುವುದರಿಂದ ಕಾರ್ಮಿಕರು ಡಿಸ್ಪೆನ್ಸರಿಗೆ ಬರದೆ, ಹತ್ತಿರದ ಖಾಸಗೀ ಕ್ಲಿನಿಕ್‌ಗಳಿಗೇ ಹೋಗುತ್ತಿದ್ದಾರೆ. ಆದರೆ ಬೆಂಗಳೂರಿನ ಹೊರಗಿರುವ ಕಾರ್ಮಿಕರು ಸಣ್ಣಪುಟ್ಟ ಕಾಯಿಲೆಗಳಿಗೂ ಇ.ಎಸ್.ಐ ಡಿಸ್ಪೆನ್ಸರಿಯನ್ನೇ ಅವಲಂಬಿಸಿದ್ದಾರೆ. ಆದರೆ ಬೆಂಗಳೂರು ಹೊರತು ಪಡಿಸಿ ಇತರ ಜಿಲ್ಲೆಗಳಲ್ಲಿ ಡಿಸ್ಪೆನ್ಸರಿಯ ದೂರ 10 ಕಿ.ಮೀ ಇದ್ದರೂ ಸಹ ಕಾರ್ಮಿಕರು ಅದನ್ನು ಗರಿಷ್ಠಮಟ್ಟದಲ್ಲಿ ಬಳಸುತ್ತಿದ್ದಾರೆ. ಇದರಿಂದ ಅವರಿಗೆ ಇ.ಎಸ್.ಐ ಅವಶ್ಯಕತೆ ಬಹಳ ಇದೆ ಎಂದು ಕಂಡುಬರುತ್ತದೆ.

## ಡಿಸ್ಪೆನ್ಸರಿಯ ಸಮಯ

ಕಾರ್ಮಿಕರ ಇ.ಎಸ್.ಐ ಡಿಸ್ಪೆನ್ಸರಿ ಬಳಕೆಯಲ್ಲಿ ಮುಖ್ಯ ಪಾತ್ರ ವಹಿಸುವ ಅಂಶವೆಂದರೆ ಅದು ಕಾರ್ಯನಿರ್ವಹಿಸುವ ಸಮಯ. ಕಾರ್ಮಿಕರು ಕೆಲಸಕ್ಕೆ ಹೋಗುವ ಮುನ್ನ ಮತ್ತು ಕೆಲಸದ ನಂತರ ಕಾರ್ಯನಿರ್ವಹಿಸುವ ಡಿಸ್ಪೆನ್ಸರಿಯನ್ನು ಉಪಯೋಗಿಸುವ ಪ್ರಮಾಣ ಬೆಂಗಳೂರಿನಲ್ಲಿ ಗಣನೀಯವಾಗಿ ಹೆಚ್ಚಾಗಿದೆ. ಆದರೆ ಬೆಂಗಳೂರು ಬಿಟ್ಟು ಇತರ ಜಿಲ್ಲೆಗಳಲ್ಲಿನ ಡಿಸ್ಪೆನ್ಸರಿಗಳು ಬೆಳಿಗ್ಗೆ 10 ರಿಂದ 5 ಗಂಟೆಯವರೆಗೆ ಕೆಲಸ ಮಾಡುತ್ತವೆ. ಕಾರ್ಮಿಕರು ಸಣ್ಣಪುಟ್ಟ ಚಿಕಿತ್ಸೆಗೂ ಒಂದು ದಿನ ರಜೆ ಹಾಕಿ ಬರಬೇಕಾಗಿದೆ. ಆದರೂ ಸಹ ಈ ಸ್ಥಳಗಳಲ್ಲಿ ಕಾರ್ಮಿಕರು ಇ.ಎಸ್.ಐ ಮೇಲೆಯೇ ಅವಲಂಬಿತರಾಗಿದ್ದಾರೆ.

ಗಾರ್ಮೆಂಟ್ಸ್ ಉದ್ಯಮದಲ್ಲಿ ಉತ್ತರಭಾರತದಿಂದ ವಲಸೆ ಬಂದ ಕಾರ್ಮಿಕರು ಇತ್ತೀಚೆಗೆ ಹೆಚ್ಚುತ್ತಿದ್ದು, ಅವರು ಇ.ಎಸ್.ಐ ಡಿಸ್ಪೆನ್ಸರಿಯಲ್ಲಿ ಭಾಷೆಯ ತೊಂದರೆ ಎದುರಿಸುತ್ತಿದ್ದಾರೆ. ಅನುಸರಿಸಬೇಕಾದ ಇ.ಎಸ್.ಐ ಪ್ರಕ್ರಿಯೆಗಳು ಗೊತ್ತಿಲ್ಲದೇ ಇದ್ದಲ್ಲಿ ಅದನ್ನು ತಿಳಿಸಿಕೊಡಲು ಡಿಸ್ಪೆನ್ಸರಿಯ ಸಿಬ್ಬಂದಿಗಳು ನಿರಾಕರಿಸುತ್ತಾರೆ.

*ಮುಂದಿನ ಸಂಚಿಕೆಯಲ್ಲಿ ಮುಂದುವರೆಯುತ್ತದೆ*



Scanned with OKEN Scanner

# ಕನಿಷ್ಠ ವೇತನಕ್ಕಾಗಿ ಗಾರ್ಮೆಂ

ಗಾರ್ಮೆಂಟ್ಸ್ ಉದ್ಯಮಕ ಕನಿಷ್ಠವೇತನದ ಪರಿಷ್ಕರಣಾ ಪ್ರಕ್ರಿಯೆಯು ಕಳೆದ ಎರಡು ವರ್ಷಗಳಿಂದ ನಡೆಯುತ್ತಿದ್ದರೂ, ಮಾಲೀಕರ ತಕರಾರು ಮತ್ತು ಸರ್ಕಾರದ ನಿರ್ಲಕ್ಯ ಧೋರಣೆಯಿಂದ ಇನ್ನೂ ಕೊನೆಯಾಗಿಲ್ಲ. ವೇತನ ಪರಿಷ್ಕರಣಾ ಪ್ರಕ್ರಿಯೆಯನ್ನು ಮುಂದೂಡುತ್ತಾ ಗಾರ್ಮೆಂಟ್ಸ್ ಮಾಲೀಕರು ಕಾರ್ಮಿಕ ವೇತನವನ್ನು ಪರೋಕ್ಷವಾಗಿ "ಕದಿಯುತ್ತಿದ್ದಾರೆ".

ಕರ್ನಾಟಕದ ಅನುಸೂಚಿತ ಉದ್ದಿಮೆಗಳ ಕಾರ್ಮಿಕರೆಲ್ಲರಿಗೂ ವೈಜ್ಞಾನಿಕವಾಗಿ ಲೆಕ್ಕ ಹಾಕಿದ ಏಕರೀತಿಯ ಕನಿಷ್ಠವೇತನವನ್ನು ಹಂತಹಂತವಾಗಿ ನಿಗದಿಪಡಿಸಬೇಕೆಂಬ ಉದ್ದೇಶದಿಂದ ಬೆಂಗಳೂರಿಗೆ (ವಲಯ-1) 11,557 ರೂ. ಗಳನ್ನು ನಿಗದಿಗೊಳಿಸಿತ್ತು. 2018 ರಲ್ಲಿ ಗಾರ್ಮೆಂಟ್ಸ್ ಉದ್ಯಮಕ್ಕೂ ಸಹ ಇಷ್ಟೇ ವೇತನ ಪರಿಷ್ಕರಿಸಲು ನಿರ್ಧರಿಸಿತ್ತು. ಆದರೆ ಗಾರ್ಮೆಂಟ್ಸ್ ಮಾಲೀಕರು ಇಷ್ಟು ವೇತನ ನಮಗೆ ನೀಡಲು ಸಾಧ್ಯವೇ ಇಲ್ಲ ಎಂದು ತಕರಾರು ತೆಗೆದು, ಇಷ್ಟು ವೇತನ ನಿಗದಿ ಮಾಡಿದರೆ ನಾವು ಇಲ್ಲಿಂದ ಬೇರೆ ಕಡೆಗೆ ಹೋಗುತ್ತೇವೆಂದು ಬೆದರಿಸಿ ಸರ್ಕಾರದ ಮೇಲೆ ಒತ್ತಡ ತಂದವು. ಈ ಮಾತುಕತೆಯ ಎರಡು ವರ್ಷಗಳ ಕಾಲ ಎಳೆಯಿತು. ಇತರ ಉದ್ಯಮಗಳ ಕಾರ್ಮಿಕರಿಗೆಲ್ಲ ರೂ. 11,557 ನಿಗದಿಯಾಗಿದ್ದರೆ, ಗಾರ್ಮೆಂಟ್ಸ್ ಕಾರ್ಮಿಕರಿಗೆ ಮಾತ್ರ ಅದಕ್ಕಿಂತ ಕಡಿಮೆ ಮಾಡಲು ಸರ್ಕಾರವೂ ನಿರ್ಧರಿಸಿಬಿಟ್ಟಿತು.

ಈಗಾಗಲೇ ಕಡಿಮೆ ವೇತನದಿಂದ ತತ್ತರಿಸುತ್ತಿರುವ ಗಾರ್ಮೆಂಟ್ಸ್ ಕಾರ್ಮಿಕರು ತಮ್ಮ ವೇತನ ಹೆಚ್ಚಾಗುತ್ತದೆ ಎಂದು ಎರಡು ವರ್ಷದಿಂದಲೂ ಕಾದಿದ್ದಾರೆ. ಆದರೆ ಸರ್ಕಾರವು ಮಾಲೀಕರ ಪರ ಸೇರಿ ತಮಗೆ ತಾರತಮ್ಯ ಮಾಡುತ್ತಿದ್ದಾರೆ ಎಂದು ತಿಳಿದ ಕೂಡಲೇ, ಅವರು ಹೋರಾಟ ನಡೆಸುವ ನಿರ್ಧಾರ ತೆಗೆದುಕೊಂಡರು.

ಇದರ ಪರಿಣಾಮವಾಗಿ, ಮೊದಲ ಹಂತದಲ್ಲಿ ದಿನಾಂಕ 12.9.2019 ರಂದು ಬೆಂಗಳೂರಿನ ಕಾರ್ಮಿಕ ಇಲಾಖೆಯ ಮುಂದೆ ಸಾಂಕೇತಿಕ ಪ್ರತಿಭಟನೆ ನಡೆಸುವುದೆಂದು ತೀರ್ಮಾನಿಸಲಾಯಿತು. ಈ ಪ್ರತಿಭಟನೆಗೆ ರಾಜ್ಯದ ಎಲ್ಲ ಪ್ರಮುಖ ಕೇಂದ್ರ ಸಂಘಟನೆಗಳಾದ AITUC, CITU, INTUC, AICCTU, AIUTUC, ಗಳು ಮತ್ತು ವಕೀಲರ ಸಂಘಟನೆಗಳು ತಮ್ಮ ಬೆಂಬಲವನ್ನು ಸೂಚಿಸಿದರು. ದಿನಾಂಕ 12.9.2019 ರಂದು ಶ್ರೀರಂಗ ಪಟ್ಟಣ, ಮದ್ದೂರು, ರಾಮನಗರ ಮತ್ತು ಬೆಂಗಳೂರಿನ ಸುಮಾರು 900-1000 ಕಾರ್ಮಿಕರು ಕಾರ್ಮಿಕ ಇಲಾಖೆಯ ಆವರಣದಲ್ಲಿ ಪ್ರತಿಭಟನೆ ನಡೆಸಿ, ವೇತನ ನಿಗದಿಯಲ್ಲಿ





*"ನಾನು ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ನಲ್ಲಿ ರಾಜ್ಯ ಉಪಾಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದೇನೆ. ಶ್ರೀರಂಗ ಪಟ್ಟಣದ ಇ.ಸಿ.ಸಿ 2 ನಲ್ಲಿಟೈಲರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ 73 ಅನುಸೂಚಿತ ಉದ್ದಿಮೆಗಳಿಗೆ ಈಗಾಗಲೇ ಒಂದೇ ರೀತಿಯಾಗಿ 11557 ರೂ. ಗಳನ್ನು ನಿಗದಿ ಮಾಡಿದೆ. ಆದರೆ ನಮ್ಮ ಗಾರ್ಮೆಂಟ್ ಕಾರ್ಮಿಕರಿಗೆ ಮಾತ್ರ ತುಂಬಾ ಅನ್ಯಾಯ ಮಾಡುತ್ತಿದ್ದಾರೆ. ಗಾರ್ಮೆಂಟ್ಸ್ ಕಾರ್ಮಿಕರಲ್ಲಿ ಮಹಿಳೆಯರೇ ಹೆಚ್ಚು. ಆದರೆ ಎಷ್ಟು ಕಷ್ಟ ಪಟ್ಟು ಕೆಲಸ ಮಾಡಿದರೂ ನಮಗೆ ತಿಂಗಳಿಗೆ ಸಿಗುವುದು 7500 ರೂ. ಗಳು ಮಾತ್ರ, ಅದೂ ಒಂದು ದಿನವೂ ರಜೆ ಹಾಕದೆ ಹೋದರೆ ಮಾತ್ರ. ಈ ಸಂಬಳ ಊಟಕ್ಕೂ ಸಾಕಾಗುವುದಿಲ್ಲ, ಅಂತಹದರಲ್ಲಿ ನಾವು ಎಲ್ಲಿ ಐಶಾರಾಮಿ ಜೀವನ -ನಡೆಸಲಾಗುತ್ತದೆ? ಮತ್ತೆ ಮನೆಯಲ್ಲೂ ದುಡಿದು, 1 ನಿಮಿಷ ಪುರುಸೊತ್ತು ಇಲ್ಲದೆ ಆಟೋ ಹತ್ತಿಕೊಂಡು ಕೆಲಸಕ್ಕೆ ಬರುತ್ತಾರೆ. ಇಲ್ಲಿ ಒಂದು ನಿಮಿಷ ಬಿಡುವಿಲ್ಲದೆ 8 ಗಂಟೆಗಳ ಕಾಲ ದುಡಿದು ಮನೆಗೆ ಹೋಗುತ್ತಾರೆ. ನಮಗೆ ಕಳೆದ 5 ವರ್ಷದಿಂದ ಕನಿಷ್ಠ ವೇತನ ಹೆಚ್ಚು ಮಾಡಿಲ್ಲ, 2018 ರಲ್ಲೇ ಹೆಚ್ಚಾಗಬೇಕಿತ್ತು, ಆದರೆ ಆಗಲಿಲ್ಲ. ನಮ್ಮಿಂದ ಓಟು ಪಡೆದ ಸರ್ಕಾರ ನಮಗೆ ಮೋಸ ಮಾಡುತ್ತದೆ."*

*ಆದಕ್ಕೆ ನಾವು ಈ ಬಾರಿ ಎಲ್ಲರಿಗೂ ಕೊಟ್ಟಷ್ಟು ನಮಗೂ ಕನಿಷ್ಠವೇತನ ನಿಗದಿ ಮಾಡಬೇಕೆಂದು ಹೋರಾಟ ಮಾಡಲು, ನಾವು ಎಲ್ಲಾ ಕಾರ್ಮಿಕರು ಸೇರಿಕಂದರೆ 800 ರಿಂದ 900 ಕಾರ್ಮಿಕರು (ಎಲ್ಲಾ ಕಾರ್ಮಿಕರು ಅಲ್ಲಿಗೆ ಬರುವುದಕ್ಕೆ 200 ರೂ.ಗಳನ್ನು ಕೊಟ್ಟು 12 ಬಸ್ಸುಗಳನ್ನು ಮಾಡಿಕೊಂಡು ಬಂದು) ಬೆಂಗಳೂರಿನಲ್ಲಿರುವ ಕಾರ್ಮಿಕ ಭವನದಲ್ಲಿ ಬೃಹತ್ ಪ್ರತಿಭಟನೆ ಮಾಡಿದೆವು.ಇವಾಗ ಸರ್ಕಾರ ಇದನ್ನು ಮನಗಣನೆ ಮಾಡಲೇ ಬೇಕು.ಇಲ್ಲದಿದ್ದರೆ ನಮ್ಮ ಹೋರಾಟ ನಿಲ್ಲುವುದಿಲ್ಲ. ."*

**ಪದ್ಮಾ, ಉಪಾಧ್ಯಕ್ಷರು, GATWU**


# ಕಾರ್ಮಿಕರ ನಿಲ್ಲದ ಹೋರಾಟ





ಹಿಮತ್‌ಸಿಂಗ್ ಕಾ ಸೀಡೆ ಕಂಪನಿಗೆ ₹315 ಕೋಟಿ ರಿಯಾಯಿತಿ: ಸಿಎಜಿ

## ಸಿದ್ದರಾಮಯ್ಯ ಅವಧಿಯ ಜವಳಿ ನೀತಿ ವಿಫಲ





**ದಿನಾಂಕ 11.10.2019ರ ಪ್ರಜಾವಾಣಿಯ ವರದಿಗೂ, 2018ರ ಫೆಬ್ರವರಿಯಲ್ಲಿ ಗಾರ್ಮೆಂಟ್ಸ್ ಉದ್ಯಮದ ಕನಿಷ್ಠ ವೇತನ ಕರಡು ಆದೇಶವನ್ನು ಹಿಮತ್‌ಸಿಂಗ್ ಕಾ ಸೀಡೆ ಮತ್ತು ಶಾಹಿ ಎಕ್ಸ್‌ಪೋರ್ಟ್ಸ್ ಮನವಿಗಳ ಮೇರೆಗೆ ಸಿದ್ದರಾಮಯ್ಯನವರ ಸರ್ಕಾರ ಹಿಂತೆಗೆದುಕೊಂಡದಕ್ಕೂ ಏನಾದರೂ ಸಂಬಂಧ ಇದೆಯೇ?**

ಇತರ ಕಾರ್ಮಿಕರಿಗೂ ತಮಗೂ ತಾರತಮ್ಯ ಮಾಡಬಾರದೆಂದು ಆಗ್ರಹಿಸಿದರು.

ಒಂದು ದಿನ ವೇತನ ಕಡಿತವಾದರೂ ಪರವಾಗಿಲ್ಲ ಎಂದು ಎಲ್ಲ ಕಾರ್ಮಿಕರೂ ತಮ್ಮ ಖರ್ಚನ್ನು ತಾವೇ ಭರಿಸಿಕೊಂಡು 100 ಕಿ.ಮೀ ಪ್ರಯಾಣಿಸಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದು, ವೇತನ ಹೆಚ್ಚಾಗುವುದು ಅವರಿಗೆಷ್ಟು ಅನಿವಾರ್ಯವಾಗಿದೆ ಎಂಬುದನ್ನು ತೋರಿಸಿತು.

ಕಾರ್ಮಿಕರು ಏನನ್ನೇ ಪಡೆಯ ಬೇಕೆಂದರೂ ಹೋರಾಡಿಯೇ ತೆಗೆದುಕೊಳ್ಳಬೇಕಾದಂತಹ ಸಂದರ್ಭವನ್ನು ಸೃಷ್ಟಿಸಿ, ನಂತರ ಏನೇ ತೊಂದರೆಯಾದರೂ ಅವರನ್ನು ದೂಷಿಸುವ ವ್ಯವಸ್ಥೆ ನಮ್ಮಲ್ಲಿದೆ. ಆದರೆ ಕಾರ್ಮಿಕರನ್ನು ಭೂಮಿಯವರೆಗೂ ಬಗ್ಗಿಸಿ. ಇನ್ನೂ ಬಗ್ಗು ಎಂದಾಗ ಕಾರ್ಮಿಕರು ಪುಟಿದೆದ್ದು ಪ್ರತಿಭಟಿಸಲೇ ಬೇಕಾಗುತ್ತದೆ. ಅದನ್ನು ಅವರು ಮಾಡುತ್ತಾರೆ ಕೂಡಾ.

*"ನಮಗೆ ವೇತನ 2018 ರಲ್ಲೇ ಹೆಚ್ಚಾಗಬೇಕಿತ್ತು. ಆದರೆ ಮ್ಯಾನೇಜ್‌ಮೆಂಟ್ ಹಾಗೂ ಸರ್ಕಾರ ಅದಕ್ಕೆ ಕಲ್ಲು ಹಾಕಿದರು. ಈ ಬಾರಿ ಕನಿಷ್ಠ ವೇತನ ರೂ.10,500 ಆದರೂ ಆಗುತ್ತೆ ಅಂತ ಕಾಯ್ತಾ ಇದ್ವಿ. ಆದರೆ ಸರ್ಕಾರವು ನಮ್ಮ ಮ್ಯಾನೇಜ್ ಮೆಂಟ್ ಮಾತು ಕೇಳಿ, ದಿನಕ್ಕೆ ಕೇವಲ 27 ರೂ. ಹೆಚ್ಚು ಮಾಡ್ತೀವಿ ಅಂತ ಹೇಳಿದಾರೆ. ನಮಗೆ ಖಂಡಿತಾ ಅಷ್ಟು ವೇತನ ಸಾಲುವುದಿಲ್ಲ ಆದಕೆ ಶ್ರೀರಂಗಪಟ್ಟಣದಲ್ಲಿ ಐಸಿಸಿ-2 ಕಂಪನಿಯ ಕಾರ್ಮಿಕರಿಗೆ ಮೀಟಿಂಗ್ ಮಾಡಿ ನಾವು ಬೆಂಗಳೂರಿಗೆ ಹೋಗಿ ಲೇಬರ್ ಡಿಪಾರ್ಟ್‌ಮೆಂಟ್ ಮುಂದೆ ಪ್ರತಿಭಟನೆ ಮಾಡೋಣ ಎಂದು ಮಾತನಾಡಿದೆವು. ಆಗ ನಮ್ಮ ಕಂಪನಿಯ ಕಾರ್ಮಿಕರು ಬೆಂಗಳೂರು ಹೋಗೋಣ ಎಂದು ಸುಮಾರು 200 ರೂ.ಗಳಂತೆ ಹಾಕಿಕೊಟ್ಟು ಸುಮಾರು 800 ರಿಂದ 900 ಕಾರ್ಮಿಕರು ದಿನಾಂಕ 12.09.2019 ರಂದು ಶ್ರೀರಂಗ ಪಟ್ಟಣದಿಂದ ಬೆಂಗಳೂರಿನ ಕಾರ್ಮಿಕ ಭವನಕ್ಕೆ ಹೋಗಿ ಅಲ್ಲಿ ಬೃಹತ್ ಪ್ರತಿಭಟನೆ ಮಾಡಿದೆವು. ಅಲ್ಲಿ ಶ್ರೀರಂಗಪಟ್ಟಣ, ಮದ್ದೂರು, ರಾಮನಗರ ಮತ್ತು ಬೆಂಗಳೂರಿನ ಎಲ್ಲಾ ಕಾರ್ಮಿಕರು ಸೇರಿದ್ದರು. ಸರ್ಕಾರ ನಮ್ಮ ಮನವಿಗೆ ಸ್ಪಂದಿಸದಿದ್ದರೆ ಮುಂದಿನ ದಿನಗಳಲ್ಲಿ ಬೃಹತ್ ಹೋರಾಟ ಮಾಡಬೇಕಾಗುತ್ತದೆ."*

***ನವೀನ್, ಸಂಘಟನಾ ಕಾರ್ಯದರ್ಶಿ, GATWU***

*"ಕೊಡೋ 7000 ಸಂಬಳ ಕಾರ್ಮಿಕರಿಗೆ ಸಾಕಾಗುವುದಿಲ್ಲ. ಜೊತೆಗೆ ಸೂಪರ್‌ವೈಸರ್‌ಗಳ ಹತ್ತಿರ ಬಾಯಿಗೆ ಬಂದ ಹಾಗೇ ಬೈಯಿಸಿ ಕೊಳ್ಳಬೇಕು. ಅದರಲ್ಲೂ ಅತ್ಯಂತ ಕಡಿಮೆ ವೇತನದಲ್ಲಿ ನಾವೆಲ್ಲರೂ ಕೆಲಸ ಮಾಡುತ್ತಿದ್ದೇವೆ. ನಮ್ಮ ಕಾರ್ಮಿಕರ ಕೂಗು ಸರ್ಕಾರಕ್ಕೆ ಕೇಳಿಸುತ್ತಿಲ್ಲವೇ. ದಯವಿಟ್ಟು ನಮಗೆ ನಿಗದಿ ಮಾಡಬೇಕಾದ ಕನಿಷ್ಠ ವೇತನವನ್ನು ಕೊಡಬೇಕು. ಇದಕ್ಕಾಗಿ ನಾವು ಕಾರ್ಮಿಕರೆಲ್ಲರೂ ಸೇರಿ ಬೆಂಗಳೂರಿನಲ್ಲಿ ಪ್ರತಿಭಟನೆ ಮಾಡಿದೆವು."*

***ಪೂರ್ಣಿಮಾ, ಸದಸ್ಯರು, GATWU***

## ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧ, ನಿವಾರಣೆ) ಕಾಯಿದೆ 2013.

ಸುನೀತಾ ಕೆಲಸ ಮಾಡುವ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಅವಳ ಸಹೋದ್ಯೋಗಿಯೊಬ್ಬರು ಕೆಲಸ ಮಾಡುವಾಗ ಅಶ್ಲೀಲವಾದ ಜೋಕ್‌ಗಳನ್ನು ಹೇಳುತ್ತಿರುತ್ತಾರೆ. ಅದು ಅವಳಿಗೆ ಇಷ್ಟವಾಗುವುದಿಲ್ಲ. ಇತರ ಮಹಿಳೆಯರಿಗೂ ಮುಜುಗರ ವಾದರೂ ಅದನ್ನು ವಿರೋಧಿಸುವುದಿಲ್ಲ. ಆದರೆ ಸುನೀತಾ ಅದನ್ನು ವಿರೋಧಿಸಿದಾಗ ಯಾರೂ ಅವಳನ್ನು ಬೆಂಬಲಿಸಲಿಲ್ಲ. ಬದಲಿಗೆ ಅವಳದೇ ತಪ್ಪು ಎಂದರು. ಸಣ್ಣ ವಿಷಯವನ್ನು ದೊಡ್ಡದು ಮಾಡಬೇಡ. ಅವನ ಪಾಡಿಗೆ ಅವನು ಹೇಳಿಕೊಳ್ಳುತ್ತಾನೆ. ನೀನು ಕಿವಿಯ ಮೇಲೆ ಬೀಳದಂತೆ ಇರು ಎಂದು ಅವಳಿಗೆ ಬುದ್ಧಿ ಹೇಳಿದರು. ಸುನೀತಾಳಿಗೆ ತನ್ನದೇ ತಪ್ಪಿರಬಹುದೇ ಎಂದು ಗೊಂದಲವಾಯಿತು. ಅವಳು ವಿರೋಧಿಸಿದ್ದಕ್ಕೆ ಆ ಸಹೋದ್ಯೋಗಿಯು ಪ್ರತೀಕಾರ ತೀರಿಸಿಕೊಳ್ಳುವಂತೆ, ಇನ್ನಷ್ಟು ಅಶ್ಲೀಲ ಜೋಕ್‌ಗಳನ್ನು ಹೇಳುವುದು ಮುಂದುವರೆಸಿದರಲ್ಲದೆ, ಅವಳಿಗೆ ಕಾಣುವಂತೆ ಅಶ್ಲೀಲ ಭಂಗಿಗಳ ಚಿತ್ರಗಳನ್ನು ಪ್ರದರ್ಶಿಸುವುದು ಮುಂದು ವರೆಸಿದರು. ಸುನೀತಾಳಿಗೆ ಕೆಲಸದ ಸ್ಥಳವು ಅಸಹನೀಯ ವಾಯಿತು. ಇದನ್ನೂ ಮುಕ್ತವಾಗಿ ವಿರೋಧಿಸಿದರೆ, ಅದನ್ನು ನೀನೇಕೆ ನೋಡುತ್ತೀಯ? ನಮಗೆಲ್ಲ ತೋರಿಸದಿರುವುದು ನಿನಗೆ ತೋರಿಸುತ್ತಾರೆಯೇ? ಎಂದು ಇತರ ಮಹಿಳಾ ಸಹೋದ್ಯೋಗಿಗಳು ತನ್ನ ಮೇಲೇ ತಪ್ಪು ಹೊರೆಸುತ್ತಾರೆಂದು ಸುನೀತಾ ಕೆಲಸ ಬಿಡಲು ತಯಾರಾದಳು.



ರಾಣಿ ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ಟೈಲರ್. ಅವಳ ಕುಟುಂಬದ ಹೊಣೆ ಅವಳದೇ. ಅವಳ ಅಸಹಾಯಕ ಪರಿಸ್ಥಿತಿಯನ್ನು ಗಮನಿಸುತ್ತಿದ್ದ ಮ್ಯಾನೇಜರ್ ಒಬ್ಬರು ಒಮ್ಮೆ ಅವಳನ್ನು ಕೆಲಸದ ಸಮಯ ಮುಗಿದ ಮೇಲೆ ಒಂಟಿಯಾಗಿ ಕ್ಯಾಬಿನ್‌ಗೆ ಕರೆದು, ಸುತ್ತಿ ಬಳಸಿ ಮಾತನಾಡುತ್ತಾ ನೀನು ಏಕೆ ಒಬ್ಬಳೇ ದುಡಿದು ಕಷ್ಟ ಪಡುತ್ತೀಯ? ನಿನ್ನ ಮೇಲೆ ನನಗೆ ಆಸೆ ಇದೆ. ನನ್ನ ಆಸೆ ಒಂದೇ ಒಂದು ಸಾರಿ ತೀರಿಸಿಬಿಡು, ನಾಳೆಯಿಂದ ನೀನೇ ನಿನ್ನ ಬ್ಯಾಚ್‌ಗೆಲ್ಲ ಮಹಾರಾಣಿ, ನಿನ್ನನ್ನು ಸೂಪರ್‌ವೈಸರ್ ಮಾಡುತ್ತೇನೆ, ಸಂಬಳ ಹೆಚ್ಚಿಸುತ್ತೇನೆ, ಎಂದು ಆಮಿಷ ತೋರಿಸಿದರು. ಅವಳಿಗೆ ಅವರ ಮಾತು ಇಷ್ಟವಾಗದೇ ನೇರವಾಗಿ ವಿರೋಧಿಸಿದಳು. ಮೇಲಿನ ಅಧಿಕಾರಿಗೆ ಹೇಳುತ್ತೇನೆ ಎಂದು ಎಚ್ಚರಿಸಿದಳು. ಆಗ ಸುಮ್ಮನಾದ ಮ್ಯಾನೇಜರ್ ಮಾರನೆಯ ದಿನದಿಂದ ಅವಳನ್ನು ಗುರಿಯಾಗಿಸ ತೊಡಗಿದರು. ಕೆಲಸದಲ್ಲಿ ಇಲ್ಲ ಸಲ್ಲದ ತಪ್ಪು ಕಂಡು ಹಿಡಿಯುವುದು, ಎಲ್ಲರ ಮುಂದೆ ಅವಮಾನಿಸುವುದು, ಅವಳ ಚಾರಿತ್ರ್ಯವಧೆ ಮಾಡುವುದು ಹೀಗೆ ಒಂದಲ್ಲ ಒಂದು ರೀತಿ ಕಿರುಕುಳ ನೀಡುತ್ತಿದ್ದರು. ಕೆಲಸದ ಸ್ಥಳವು ಅವಳಿಗೆ ನರಕವಾಯಿತು.

ಮಹಿಳೆಯಾಗಿ, ತನ್ನದು ಏನೂ ತಪ್ಪಿಲ್ಲದಿದ್ದರೂ ಸಹ ತಾವೇ ತೊಂದರೆ ಅನುಭವಿಸುವ ಹೆಣ್ಣು ಮಕ್ಕಳ ಪರಿಸ್ಥಿತಿ ಮೇಲಿನ ಪ್ರಕರಣಗಳು ಏನನ್ನು ಕುರಿತು ಹೇಳುತ್ತವೆ? ಮಹಿಳೆಯರು ಪುರುಷರಿಂದ ಲೈಂಗಿಕ ಕಿರುಕುಳಕ್ಕೆ ಸುಲಭವಾಗಿ ಈಡಾಗುವ ಆ ತಪ್ಪನ್ನು ಸಾಂಪ್ರದಾಯಿಕ ಪುರುಷ ಪ್ರಧಾನ ಸಮಾಜವು ಮಹಿಳೆಯರ ಮೇಲೇ ಹೊರಿಸುವ ಉದಾಹರಣೆಗಳನ್ನು ಮೇಲಿನ ಪ್ರಕರಣಗಳಿಂದ ತಿಳಿಯುತ್ತದೆ. ನಮ್ಮ ಸಂವಿಧಾನ ಹೇಳುವ ಲಿಂಗತಾರತಮ್ಯವಿಲ್ಲದ ಘನತೆ, ಸಮಾನತೆ, ಸಮಾನ ಅವಕಾಶ ಮಹಿಳೆ ಮತ್ತು ಪುರುಷರಿಗೆ ಸಿಗಬೇಕು ಎಂಬ ಆಶಯವು ಈ ರೀತಿಯ ಲೈಂಗಿಕ ಕಿರುಕುಳಗಳಿಂದ ಬುಡಮೇಲಾಗುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯ, ರಾಜಸ್ಥಾನದ ಸಾಥೀನ್ ಭಾನ್ವರಿದೇವಿ ಪ್ರಕರಣದಲ್ಲಿ ಕೆಲಸದ ಸ್ಥಳದಲ್ಲಿ ಮಹಿಳೆಯರಿಗಾಗುವ ಲೈಂಗಿಕ ಕಿರುಕುಳದ ಬಗ್ಗೆ ಮೊತ್ತ ಮೊದಲು ಗಂಭೀರವಾಗಿ ಪರಿಗಣಿಸಿ 1997 ರಲ್ಲಿ "ವಿಶಾಖಾ ಮಾರ್ಗದರ್ಶೀ ಸೂತ್ರಗಳ"ನ್ನು ರಚಿಸಿತು. ಇದರ ಪ್ರಕಾರ ಕೆಲಸದ ಸ್ಥಳದಲ್ಲಿ ಮಹಿಳೆಯರ ರಕ್ಷಣೆಯ ಹೊಣೆ ಮಾಲೀಕರದೇ ಆಗಿರುತ್ತದೆ. ಅಲ್ಲಿ ನಡೆಯುವ ಲೈಂಗಿಕ ಕಿರುಕುಳಗಳನ್ನು ತಡೆಗಟ್ಟು ವುದು ಹಾಗೂ ಸಮಸ್ಯೆ ಗಳನ್ನು ನಿವಾರಿಸುವುದು ಮಾಲೀಕರ ಹೊಣೆ ಎಂದು ತೀರ್ಪು ನೀಡಿ ಈ ನಿಟ್ಟಿನಲ್ಲಿ ಮಾರ್ಗದರ್ಶಿ ಸೂತ್ರಗಳನ್ನು ರಚಿಸಿತ್ತು. 1997 ರಿಂದ 2013 ರವರೆಗೂ ಇದು 'ವಿಶಾಖಾ ಗೈಡ್‌ಲೈನ್ಸ್' ಎಂದೇ ಖ್ಯಾತಿ ಪಡೆದಿತ್ತು. ಈ ಮಾರ್ಗದರ್ಶೀ ಸೂತ್ರಗಳ ಆಧಾರ ದಲ್ಲಿಯೇ 2013 ರಲ್ಲಿ ಲೈಂಗಿಕ ಕಿರುಕುಳ ತಡೆ ಕಾಯಿದೆಯನ್ನು ರೂಪಿಸ ಲಾಗಿದೆ.

**ಕಾಯಿದೆ ನಡೆದು ಬಂದದಾರಿ**

- ಲೋಕಸಭೆ ಅನುಮೋದನೆ – 2012 ಸೆಪ್ಟೆಂಬರ್
- ರಾಜ್ಯಸಭೆ ಅನುಮೋದನೆ – 2013 ಫೆಬ್ರವರಿ
- ರಾಷ್ಟ್ರಪತಿಗಳ ಅಂಕಿತ – 2013 ಏಪ್ರಿಲ್
- ಕಾನೂನು ಜಾರಿ – 2013 ಡಿಸೆಂಬರ್

**ಕಾಯಿದೆಯ ಮುಖ್ಯಾಂಶಗಳು ಕಿರುಕುಳಗಳನ್ನು ಗಮನಿಸಬಹುದು.**

**1. ಅಸಹನೀಯ ಕೆಲಸದ ವಾತಾವರಣವನ್ನು ಸೃಷ್ಟಿಸುವುದು.**

ಒಂದೇ ಸಮನೆ ದಿಟ್ಟಿಸಿ ನೋಡುವುದು, ಯಾವುದೇ ಮುಜುಗರವಾಗುವಂತಹ ಭಂಗಿಗಳನ್ನು ಪ್ರದರ್ಶಿಸುವುದು, ಅಶ್ಲೀಲ ಮಾತುಕತೆ, ಅಶ್ಲೀಲ ದೃಶ್ಯವನ್ನು ತೋರಿಸುವುದು, ಅಥವಾ ಪ್ರದರ್ಶಿಸುವುದು, ಅಶ್ಲೀಲ ಜೋಕ್‌ಗಳನ್ನು ಹೇಳುವುದು, ಮಹಿಳೆಯರ ಅಂಗಾಗ ವರ್ಣನೆ, ಉಡುಪಿನ ಬಗ್ಗೆ ಟೀಕೆ ಮಾಡುವುದು ಇವೆಲ್ಲವುಗಳಿಂದ ಕೆಲಸದ ಸ್ಥಳವನ್ನು ಅಸಹನೀಯಗೊಳಿಸುವುದು.

**2. ಲೈಂಗಿಕ ಬಯಕೆ ತೀರಿಸುವಂತೆ ಆಮಿಷವೊಡ್ಡುವುದು ಮತ್ತು ಬೆದರಿಕೆ ಒಡ್ಡುವುದು.**

ಅಧಿಕಾರಿಯೊಬ್ಬ ತನ್ನ ಅಧಿಕಾರವನ್ನು ಉಪಯೋಗಿಸಿ ಕೊಂಡು, ತನ್ನ ಲೈಂಗಿಕ ಬಯಕೆ ತೀರಿಸಿದರೆ, ಬಡ್ತಿ ಕೊಡಿಸುತ್ತೇನೆ, ಸಂಬಳ

ಹೆಚ್ಚಿಸುತ್ತೇನೆ, ಎಂದು ಆಮಿಷವೊಡ್ಡುವುದು, ಇಲ್ಲವೇ ನಿನ್ನ ಇನ್‌ಕ್ರಿಮೆಂಟ್ ತಡೆಹಿಡಿಯುತ್ತೇನೆ ಅಥವಾ ಕೆಲಸಕ್ಕೆ ತೊಂದರೆಯಾಗುತ್ತದೆ ಎಂದು ಬೆದರಿಸುವುದು

**ಕಾನೂನು ಏನು ಹೇಳುತ್ತದೆ?**

ಎಲ್ಲ ಸಂಘಟಿತ, ಅಸಂಘಟಿತ ವಲಯ, ಆಸ್ಪತ್ರೆ, ಶಿಕ್ಷಣಸಂಸ್ಥೆಗಳು, ಖಾಸಗೀ ಸಂಸ್ಥೆ, ಸರ್ಕಾರೀ ಸಂಸ್ಥೆಗಳನ್ನೂ ಸೇರಿದಂತೆ, 10ಕ್ಕಿಂತ ಹೆಚ್ಚು ಮಂದಿ ಮಹಿಳೆಯರು ಕೆಲಸ ಮಾಡುವ ಎಲ್ಲ ಉದ್ಯೋಗ ಸ್ಥಳದಲ್ಲಿ, ಎಲ್ಲ ವಯೋಮಾನದ ಮಹಿಳೆಯರಿಗೆ ಈ ಕಾನೂನು ಅನ್ವಯವಾಗುತ್ತದೆ.

ಪ್ರತಿಯೊಬ್ಬ ಮಾಲೀಕನೂ ತನ್ನ ಮಹಿಳಾ ಉದ್ಯೋಗಿಯ ರಕ್ಷಣೆಯ ಹೊಣೆ ಹೊರಬೇಕು. ಈ ನಿಟ್ಟಿನಲ್ಲಿ ಕೆಲಸದ ಸ್ಥಳದಲ್ಲಿ "ಆಂತರಿಕ ದೂರು ಸಮಿತಿ' ಯನ್ನು ರಚಿಸಬೇಕು. ಈ ಸಮಿತಿಯ ಸದಸ್ಯರು

1. ಕೆಲಸದ ಸ್ಥಳದಲ್ಲಿ ಉನ್ನತ ಅಧಿಕಾರವನ್ನು ಹೊಂದಿರುವ ಮಹಿಳೆಯೊಬ್ಬರನ್ನು ಸಮಿತಿಯ ಅಧ್ಯಕ್ಷರನ್ನಾಗಿಸಬೇಕು.
2. ಸಮಿತಿಯ ಸದಸ್ಯರ ಸಂಖ್ಯೆಯಲ್ಲಿ 50% ಮಹಿಳೆಯರಾಗಿರಬೇಕು
3. ಒಬ್ಬ ಸರ್ಕಾರೇತರ ಸಂಸ್ಥೆಯ ಪ್ರತಿನಿಧಿಯೊಬ್ಬರನ್ನು ಒಳಗೊಂಡಿರಬೇಕು.

**ಮಾಲೀಕನ ಕರ್ತವ್ಯಗಳು**

- ಕಾನೂನಿನ ಬಗ್ಗೆ ಪ್ರತಿಯೊಬ್ಬರಿಗೂ ಅರಿವು ಮೂಡಿಸುವುದು.
- ಆಂತರಿಕ ದೂರು ಸಮಿತಿಯನ್ನು ರಚಿಸುವುದು ಹಾಗೂ ವಿಚಾರಣೆ ನಡೆಸಲು ಅನುಕೂಲವಾದ ವಾತಾವರಣ ಕಲ್ಪಿಸುವುದು.
- ಪ್ರತಿಯೊಬ್ಬ ಮಾಲೀಕರು ತಮ್ಮ ಸಂಸ್ಥೆಯ ಸ್ಥಾಯೀ ಆದೇಶದಲ್ಲಿ ಲೈಂಗಿಕ ಕಿರುಕುಳವನ್ನು ಸಹಿಸದಿರುವ ಬಗ್ಗೆ ಉಲ್ಲೇಖಿಸಬೇಕು.
- ವಿಚಾರಣಾ ಸಮಿತಿಯ ಬಗ್ಗೆ ಎಲ್ಲರೂ ಅರಿವು ಮೂಡಿಸುವುದು.
- ವಿಚಾರಣೆ ನಡೆಯುವ ಸಂದರ್ಭದಲ್ಲಿ, ಆರೋಪಿಯು ವಿಚಾರಣೆಗೆ ಹಾಜರಾಗುವಂತೆ ನೋಡಿಕೊಳ್ಳುವುದು.

**ದೂರು ನೀಡುವ ಅವಧಿ**

- ಘಟನೆ ನಡೆದ ಮೂರು ತಿಂಗಳ ಅವಧಿಯೊಳಗಾಗಿ ಸಮಿತಿಗೆ ದೂರು ನೀಡಬೇಕು.

**ವಿಚಾರಣೆಯ ರೀತಿ**

- ವಿಚಾರಣೆ ಅನೌಪಚಾರಿಕ.
- ದೂರುದಾರರ ಗೌರವರಕ್ಷಣೆ.
- ಪ್ರತ್ಯಕ್ಷ ಸಾಕ್ಷಿಗೆ ಒತ್ತಾಯಿಸಬಾರದು.
- ದೂರುದಾರರಿಗೆ ಮಾತನಾಡಲು ಮೊದಲ ಅವಕಾಶ.
- ವಿಚಾರಣೆ ಸಹಜ ನ್ಯಾಯದ ಆಧಾರದ ಮೇಲೆ ಮಾನವೀಯತೆಯಿಂದ ಕೂಡಿರಬೇಕು.
- ದೂರುದಾರರ ಗೌಪ್ಯತೆ ಕಾಪಾಡಬೇಕು.

**ವಿಚಾರಣೆಯ ಅವಧಿ**

- ದೂರು ನೀಡಿದ 90 ದಿನಗಳ ಒಳಗಾಗಿ ವಿಚಾರಣೆ ಮುಗಿಸಬೇಕು.
- ವಿಚಾರಣೆ ಮುಗಿದ 10 ದಿನಗಳ ಒಳಗಾಗಿ ವರದಿಯು ಮಾಲೀಕರಿಗೆ/ ಜಿಲ್ಲೆಯ ಅಧಿಕಾರಿ ಕೈ ಸೇರಬೇಕು. ಅಲ್ಲಿಂದ 60 ದಿನಗಳ ಒಳಗಾಗಿ ಮಾಲೀಕರು ಕ್ರಮ ಕೈಗೊಳ್ಳಬೇಕು.

**ಈ ಕಾನೂನು**

- ಕೆಲಸದ ಸ್ಥಳದಲ್ಲಿ ಮಹಿಳೆಯರಿಗೆ ಆಗುವ ಲೈಂಗಿಕ ಕಿರುಕುಳವು ಕಾನೂನಿನ ಪ್ರಕಾರ ಅಪರಾಧವಾಗುತ್ತದೆ.
- ಪುರುಷ ಮತ್ತು ಮಹಿಳಾ ಸಾಮರಸ್ಯದ ಗುರಿ ಹೊಂದಿದೆ.
- ಕಿರುಕುಳದ ವಿರುದ್ಧ ಧ್ವನಿಯೆತ್ತಲು ಮಹಿಳೆಯರಿಗೆ ಶಕ್ತಿ ನೀಡಿದೆ.

ಪ್ರತಿಭಾ ಆರ್.

## "ಸೆಟಲ್‌ಮೆಂಟ್" ಏನು ಹಾಗೆಂದರೆ?"

"ನನ್ನ ಮಗಳ ಮದುವೆ ಮಾಡ್ಬೇಕು, 5 ವರ್ಷ ಆಯ್ತು, ಕೆಲಸ ಬಿಟ್ಟು ಸೆಟಲ್‌ಮೆಂಟ್ ತಗೋತೀನಿ"

"ನಮ್ಮ ಮನೇಲಿ ತೊಂದ್ರೆ ಇದೆ, ಅದಕ್ಕೆ 5 ವರ್ಷ ಆದ ತಕ್ಷಣ ಸೆಟಲ್‌ಮೆಂಟ್ ತಗೋಳೋಣ ಅಂತಿದೀನಿ. ಮತ್ತೆ ಅಲ್ಲೇ ನ್ಯೂ ಜಾಯಿನ್ ಆಗ್ತೀನಿ"

"ನಂದು ನಾಲ್ಕೂವರೆ ವರ್ಷ ಸರ್ವೀಸ್ ಆಗಿದೆ, 5 ವರ್ಷ ಪೂರ್ತಿ ಮಾಡಕ್ಕೇ ಬಿಡ್ತಾ ಇಲ್ಲ ಕಿತಾಪತಿ ಮಾಡ್ತಾ ಇದ್ದಾರೆ"

"ಏನು ಸೆಟಲ್‌ಮೆಂಟ್ ಕೊಡ್ತಾರೋ, ಅದಕ್ಕೆ ಲೆಕ್ಕ ಬುಕ್ಕು ಏನೂ ಇಲ್ಲ, ಅವರು ಕೊಟ್ಟಷ್ಟು, ನಾವು ಇಸ್ಕೊಂಡಷ್ಟು"

"ನಂದು ನಾಲ್ಕು ವರ್ಷ ಸರ್ವೀಸ್ ಆಯ್ತು, ನಂಗೆ ಸೆಟಲ್‌ಮೆಂಟ್ ಸಿಗುತ್ತಾ?"

"ನಾನಂತೂ 5 ವರ್ಷ ಸರ್ವೀಸ್ ಆದ ತಕ್ಷಣ ಸೆಟಲ್ ಮೆಂಟ್ ತಗೊಂಡುಬಿಡ್ತೀನಿ, ಯಾಕಂದ್ರೆ ಫ್ಯಾಕ್ಟರಿ ಯಾವಾಗ ಏನಾಗುತ್ತೋ ಯಾರಿಗೆ ಗೊತ್ತು?".

5 ವರ್ಷ ಪೂರೈಸಿದರೆ ನೀಡುವ ಗ್ರಾಚುಟಿ (ಉಪಧನ) ಯನ್ನು 'ಸೆಟಲ್‌ಮೆಂಟ್' ಎಂದು ಕಾರ್ಮಿಕರು ಕರೆಯುತ್ತಾರೆ. ಈ ಸೆಟಲ್‌ಮೆಂಟ್ ಅವರಿಗೆ ಎಷ್ಟು ಮುಖ್ಯ ಎಂಬುದು ಮೇಲಿನ ಉದಾಹರಣೆಗಳಿಂದ ತಿಳಿಯುತ್ತದೆ. 5 ವರ್ಷ ಸೇವೆ ಪೂರೈಸುವುದನ್ನೇ ಕಾಯುತ್ತಿದ್ದು, ಅವರ ಅಗತ್ಯಗಳಿಗಾಗಿ ತಕ್ಷಣವೇ ಕೆಲಸ ಬಿಡುತ್ತಾರೆ. ಮೇಲ್ನೋಟಕ್ಕೆ ಇದು ಕಾರ್ಮಿಕರ ತಪ್ಪು ಎಂದೆನಿಸಿದರೂ, ಫ್ಯಾಕ್ಟರಿ ಮುಚ್ಚುವ ಭಯ, ಬಡತನದ ಜೀವನ, ಅಪನಂಬಿಕೆ, ಹಿಂದಿನ ಅನುಭವಗಳಿಂದ ಕಾರ್ಮಿಕರು ಈ ನಿರ್ಧಾರ ತೆಗೆದುಕೊಳ್ಳುತ್ತಾರೆ. ಜೊತೆಗೆ ಸೂಪರ್ ವೈಸರ್, ಫ್ಲೋರ್ ಇನ್‌ಚಾರ್ಜ್, ಪ್ರೊಡಕ್ಷನ್ ಮ್ಯಾನೇಜರ್‌ಗಳು ಕಾರ್ಮಿಕರ ಅಸಹಾಯಕತೆ, ಅಜ್ಞಾನಗಳನ್ನು ದುರುಪಯೋಗ ಪಡಿಸಿಕೊಳ್ಳುತ್ತಾರೆ. 'ಗ್ರಾಚುಟಿ' ಕಾನೂನು ಹೇಳಿರುವುದೇನು?.

**ಗ್ರಾಚುಟಿ ಕಾಯಿದೆ (1972) (Gratuity Act)**

- 5 ವರ್ಷ ಕೆಲಸ ಮಾಡಿದ ಕಾರ್ಮಿಕರು ಗ್ರಾಚುಟಿ ಪಡೆಯಲು ಅರ್ಹರಾಗುತ್ತಾರೆ.
- ಪ್ರತಿ ವರ್ಷಕ್ಕೆ 15 ದಿನಗಳ ವೇತನ
- ಗ್ರಾಚುಟಿಯನ್ನು ಲೆಕ್ಕ ಹಾಕುವ ಸೂತ್ರ : ಒಟ್ಟು ಸೇವೆಯ ವರ್ಷ X 15 X ಕಡೆಯಲ್ಲಿ ತೆಗೆದುಕೊಂಡ ವೇತನ – 26

# ಆರೋಗ್ಯ ಭಾಗ್ಯ

## ಜೀರಿಗೆ ಔಷಧೀಯ ಗುಣಗಳು

- ಜೀರಿಗೆ ಅಗಿದು ಊಟ ಮಾಡುವುದರಿಂದ ಹಸಿವು ಹೆಚ್ಚುತ್ತದಲ್ಲದೇ ಆಹಾರವು ಚೆನ್ನಾಗಿ ಜೀರ್ಣವಾಗುತ್ತದೆ.
- ಒಂದು ಚಮಚ ಜೀರಿಗೆ ಶುಂಠಿಪುಡಿ, ಬೆಲ್ಲವನ್ನು ನೀರಿಗೆ ಹಾಕಿ ಕುದಿಸಿ ಸ್ವಲ್ಪ ನಿಂಬೆರಸ ಹಿಂಡಿ ಕುಡಿದರೆ ಅಜೀರ್ಣದಿಂದ ಬಂದ ಹೊಟ್ಟೆನೋವು ಕಡಿಮೆಯಾಗುತ್ತದೆ.
- ಒಂದು ಲೋಟ ನೀರಿಗೆ ಒಂದು ಹೋಳು ನಿಂಬೆರಸ ಹಿಂಡಬೇಕು ಒಂದು ಟೀ ಚಮಚ ಜೀರಿಗೆ ಮತ್ತು ಏಲಕ್ಕಿಯನ್ನು ನುಣ್ಣಗೆ ಪುಡಿಮಾಡಿ ಬೆರಸಿ ಈ ನೀರನ್ನು ದಿನಕ್ಕೆ ಐದಾರು ಸಲ ಕುಡಿಯುತ್ತಿದ್ದರೆ ವಾಂತಿ ನಿಲ್ಲುತ್ತದೆ.
- ಬಿಸಿಲಿನಿಂದ ಮೈಮೇಲೆ ಬೆವರು ಸಾಲೆಗಳು ಏಳುತ್ತಿದ್ದರೆ ಜೀರಿಗೆ ಪುಡಿಯನ್ನು ತೆಂಗಿನ ಹಾಲಿನಲ್ಲಿ ಬೆರಸಿ ಗುಳ್ಳೆಗಳ ಮೇಲೆ ಹಚ್ಚಿ ಅರ್ಧ ಗಂಟೆಯ ನಂತರ ಉಗುರು ಬೆಚ್ಚಗಿನ ನೀರಿನಲ್ಲಿ ತೊಳೆಯಬೇಕು ಹೀಗೆ ಒಂದು ವಾರ ಮುಂದುವರೆಸಿದಲ್ಲಿ ಬೆವರು ಗುಳ್ಳೆಗಳು ಕಡಿಮೆಯಾಗುತ್ತವೆ.
- ಜೀರಿಗೆಯನ್ನು ತೆಂಗನ್ನು ಅರೆದು ತಲೆಗೆ ಹಚ್ಚಿ ಉಜ್ಜಿಕೊಂಡು ಸ್ನಾನ ಮಾಡುವುದರಿಂದ ತಲೆಹೊಟ್ಟು ನಿವಾರಣೆಯಾಗುತ್ತದೆ.
- ಗರ್ಭಿಣಿಯರು ಜೀರಿಗೆ ಕಷಾಯಕ್ಕೆ ಹಾಲು ಜೇನುತುಪ್ಪ ಸೇರಿಸಿ ಅಗಾಗ ಕುಡಿಯುತ್ತಿದ್ದರೆ ಹೆರಿಗೆ ನಂತರ ಎದೆಹಾಲಿನ ಉತ್ಪತ್ತಿ ಹೆಚ್ಚುತ್ತದೆ.

*ಲೇ : ವಸುಂಧರಾ ಭೂಪತಿ (ಸಂಗ್ರಹ : ಆರೋಗ್ಯ ಭಾಗ್ಯ)*

## ಗಾರ್ಮೆಂಟ್ಸ್ ಕಾರ್ಮಿಕರ ಮಕ್ಕಳಿಗೆ GATWU ಮತ್ತು ಗಾ.ಮ.ಕಾ ಮುನ್ನಡೆಯು ಹುಟ್ಟು ಹಬ್ಬದ ಶುಭಾಶಯ ಕೋರುತ್ತದೆ.



ತೇಜಸ್ಸು ಗೌಡ ವಿ. ಪಿ
12.09.2010



ನಿಶಾನ್ ಮೌರ್ಯ ಎಸ್.
19 ಸೆಪ್ಟೆಂಬರ್



ಅವನಿ ಯು ಗೌಡ
22.09.2017



ರಚನಾ ಬಿ.ಪಿ.
20.10.2001



ಸಂಜನಾ



ವರ್ಣಿಕಾ
22.10.2013



ಹಿತೇಕ್ಷಾ
07.12.2017



ರಿಜ್ವಾನ್
18, ಅಕ್ಟೋಬರ್

## ಮಹಿಳಾ ಕಾರ್ಮಿಕರಿಗೆ ಸಹಾಯ ಮಾಡುವ ಇನ್ನಿತರೆ ಸಂಸ್ಥೆಗಳು

- **ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ**

  ನಂ. 220, ಎರಡನೇ ಮಹಡಿ, ಚೆನ್ನಕೇಶವ ನಿಲಯ,
  ಗಣೇಶ ದೇವಸ್ಥಾನದ ಹತ್ತಿರ, ಪಂತರಪಾಳ್ಯ, ನಾಯಂಡಹಳ್ಳಿ,
  ಮೈಸೂರು ರಸ್ತೆ, ಬೆಂಗಳೂರು–560 039.

- **ಕರ್ನಾಟಕ ಮಹಿಳಾ ಆಯೋಗ**

  ನಂ. 105, ಮೊದಲನೇ ಮಹಡಿ, ಕರ್ನಾಟಕ ಗೃಹ ಮಂಡಳಿ ಕಟ್ಟಡ,
  ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560009
  ದೂ: 22216485

ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU) ನಂ. 17/1, ಹೊಸ ಗುಡ್ಡದಹಳ್ಳಿ ಬಸ್‌ಸ್ಟಾಪ್, ಬಾಲಾಜಿ ಕಲ್ಯಾಣ ಮಂಟಪ ಹತ್ತಿರ, ಮೈಸೂರು ರಸ್ತೆ, ಬೆಂಗಳೂರು – 560 026. ದೂ: 080–26745242 । ಮುದ್ರಣ : ಇಳಾ ಮುದ್ರಣ, ಬೆಂಗಳೂರು – 2560 026. ದೂ. : 26757159